**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ 1243/2021**

ಹೆಸರುಃ ರುದ್ರೇಶ್ ಎಸ್ ಆರ್ ಸಿ.ಡಬ್ಲ್ಯೂಃ 20

ವಯಸ್ಸುಃ 45 ಪಿ.ಡಬ್ಲ್ಯೂಃ 9

ತಂದೆಃ ರೇವಣ ಎಸ್

ಉದ್ಯೋಗಃ ಮುಖ್ಯ ಪೇದ ವಿದ್ಯಾನಗರ ಪೊ.ಠಾಣೆ

ವಾಸ ಸ್ಥಳಃ ದಾವಣಗೆರೆ

ಸಾಕ್ಷಿಗೆ ದಿನಾಂಕಃ 04.12.2024 ರಂದು ಪ್ರಮಾಣ ವಚನ ಬೋಧಿಸಲಾಗಿ ಸಾಕ್ಷಿ ಯ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

19.06.2015 ರಿಂದ 12.06.2020 ರವರೆಗೆ ಪೇದೆಯಾಗಿ ಹಾಗೂ ಮುಖ್ಯ ಪೇದೆಯಾಗಿ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯನಿರ್ವಹಿಸಿರುತ್ತೇನೆ.

ದಿಃ 01-12-2020 ರಂದು ರಾತ್ರಿ 8-30 ಗಂಟೆ ಸಮಯದಲ್ಲಿ ಚಾಸಾ 20 ಹಾಗೂ ಚಾಸಾ 11, 15 ರವರು ಚನ್ನಗಿರಿ ಟೌನ್ ನ ಉಪ ವಲಯದ ತಾವರಕೆರೆ ಕ್ರಾಸ್ ಹತ್ತಿರ ನಾವುಗಳು ವಾಹನವನ್ನು ತಪಾಸಣೆ ಮಾಡುತ್ತಿದ್ದಾಗ ಆರೋಪಿಯು ಸೂಚನೆ ನೀಡಿದ್ದರು ಬೈಕನ್ನು ನಿಲ್ಲಿಸದೇ ಸಂತೆಬೆನ್ನೂರಿನ ಕಡೆಗೆ ಜೋರಾಗಿ ಚಲಾಯಿಸಿಕೊಂಡು ಹೋಗಿರುತ್ತಾರೆ ಆ ಸಮಯದಲ್ಲಿ ನಮಗೆ ಸದರಿ ವ್ಯಕ್ತಿಯ ಮೇಲೆ ಅನುಮಾನ ಬಂದು ಇಲಾಖಾ ಜೀಪಿನಲ್ಲಿ ಬೈ ಕ್ ಸವಾರನನ್ನು ಹಿಂಬಾಲಿಸಿರುತ್ತೇವೆ. ನಂತರ ಚಾಸಾ 20 ರವರು ಚಾಸಾ 21 ರವರಿಗೆ ಸದರಿ ವಿಚಾರವಾಗಿ ಸೂಚನೆಯನ್ನು ನೀಡಿರುತ್ತಾರೆ. ನಂತರ ಚಾಸಾ 21 ರವರು ಸದರಿ ವ್ಯಕ್ತಿಯ ಹೆಸರು ವಿಳಾಸವನ್ನು ಕೇಳಲಾಗಿ ಚಾಂದ್ ಪೀರ್ ತಂದೆ ಲೇಟ್ ಮೊಹಮದ್ ಸೈಫುಲ್ಲಾ 25 ವರ್ಷ ವಾಸ ವಡ್ನಾಳ್ ರಾಜಣ್ಣ ಬಡಾವಣೆ ಚನ್ನಗಿರಿ ಟೌನ್ ಎಂದು ತಿಳಿದುಬಂದಿರುತ್ತದೆ. ನಂತರ ಚಾಸಾ 21 ರವರು ಸದರಿ ವ್ಯಕ್ತಿಗೆ ವಾಹನ ಸಂಖ್ಯೆ ಹಾಗೂ ದಾಖಲಾತಿಗಳನ್ನು ಕೇಳಿರುತ್ತಾರೆ. ನಂತರ 30.11.2020 ರಂದು ಹೆಬ್ಬಳಗೆರೆ ಗ್ರಾಮದ ಮನೆಯೊಂದರ ಮುಂದೆ ನಿಲ್ಲಿಸಿದ ಬೈಕನ್ನು ಕಳುವು ಮಾಡಿಕೊಂಡು ಬಂದಿರುವುದಾಗಿ ತಿಳಿಸಿರುತ್ತಾರೆ.

ಸದರಿ ವಾಹನವು ಕಪ್ಪು ಬಣ್ಣದ ಕೆಂಪು ಪಟ್ಟಿಯ ಪಲ್ಸರ್ ಬೈಕ್ ಆಗಿರುತ್ತದೆ. ನಂತರ ಚಾಸಾ 21 ರವರು ಕೃತ್ಯ ನಡೆದ ಸ್ಥಳಕ್ಕೆ ಚಾಸಾ 4 ಮತ್ತು 5 ರವರನ್ನು ಬರಮಾಡಿಕೊಂಡು ಸದರಿ ವಿಚರವನ್ನು ತಿಳಿಸಿ ಪಂಚರನ್ನಾಗಿ ಸಹಕರಿಸಲು ಕೋರಿರುತ್ತಾರೆ. ಪಂಚರ ಸಮಕ್ಷಮ ಬೈಕಿನ ಬಲಭಾಗದ ಬ್ಯಾಗನ್ನು ಪರಿಶೀಲಿಸಿ ನೋಡಲಾಗಿ ನೀಲಿ ಕವರ್ ಬ್ಯಾಗ್ ದೊರೆತಿದ್ದು ಸದರಿ ಬ್ಯಾಗ್ ನಲ್ಲಿ ಬೆಳ್ಳಿ ಮತ್ತು ಬಂಗಾರದ ಆಭರಣಗಳು ಹಾಗೂ ಮೊಬೈಲ್ ಗಳು ಇದ್ದವು. ಈ ಪ್ರಕರಣಕ್ಕೆ ಸಂಬಂಧಪಟ್ಟ ಆರೋಪಿಯು ಅದೇ ವರ್ಷದ ಜುಲೈ ತಿಂಗಳಿನಲ್ಲಿ ಚನ್ನಗಿರಿ ಟೌನ್ ನ ಎನ್ ಎಸ್ ಎಸ್ ರಸ್ತೆಯಲ್ಲಿರುವ  ಮನೆಯೊಂದರಲ್ಲಿ 1 ಜೊತೆ ಬಂಗಾರದ ಕಿವಿಯೋಲೆ, 1 ಜೊತೆ ಲಕ್ಷ್ಮೀ ವಿಗ್ರಹ ಇರುವ ಬೆಳ್ಳಿ ಕಾಯಿನ್ ಹಾಗೂ ಒಂದು ಬೆಳ್ಳಿಯ ಪದಕವನ್ನು  ಕಳುವು ಮಾಡಿರುವುದಾಗಿ ತಿಳಿಸಿ ಹಾಜರುಪಡಿಸಿದ್ದನ್ನು ಪಂಚರ ಸಮಕ್ಷಮ ನಿಪಿ 2 ರಂತೆ ಪಂಚನಾಮೆಯನ್ನು ರಾತ್ರಿ 9-30 ರಿಂದ 10.15 ರವರೆಗೆ ಚಾಸಾ 4 ಮತ್ತು 5 ರವರ ಸಮಕ್ಷಮ ಚಾಸಾ 21 ರವರು ಜರುಗಿಸಿರುತ್ತಾರೆ. ಸದರಿ ಪಂಚನಾಮೆಗೆ ನನ್ನ ಹಾಗೂ ಆರೋಪಿ ಹಾಗೂ ಚಾಸಾ 11 ರಿಂದ 15 ಹಾಗೂ 20 ರವರ ಸಹಿಗಳನ್ನು ಪಡೆದಿರುತ್ತಾರೆ. ಸಾಕ್ಷಿಯು ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ನಿಪಿ 2(ಸಿ) ಎಂದು ಗುರುತಿಸಲಾಯಿತು. ನಿಪಿ 2 ನ್ನು ಜರುಗಿಸುವ ಕಾಲಕ್ಕೆ ಮೂರು ಭಾವಚಿತ್ರಗಳನ್ನು ತೆಗೆದಿದ್ದು ಸದರಿ ಭಾವಚಿತ್ರಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಈಗಾಗಲೇ ನಿಪಿ 3, 4 ಹಾಗೂ 10 ಎಂದು ಗುರುತಿಸಲಾಗಿದೆ.

ಅಮಾನತುಪಡಿಸಿಕೊಂಡ ಪ್ರಸ್ತುತ ಪ್ರಕರಣದ 1 ಜೊತೆ ಬಂಗಾರದ ಕಿವಿಯೋಲೆ, 1 ಜೊತೆ ಲಕ್ಷ್ಮೀ ವಿಗ್ರಹ ಇರುವ ಬೆಳ್ಳಿ ಕಾಯಿನ್ ಹಾಗೂ ಒಂದು ಬೆಳ್ಳಿಯ ಪದಕ ಒಟ್ಟು ಮೌಲ್ಯ  10,400/- ಬೆಲೆಯುಳ್ಳ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವಸ್ತುಗಳನ್ನು ಈಗಾಗಲೇ ಚಾಸಾ 1ರವರು ನ್ಯಾಯಾಲಯದ ಮಧ್ಯಂತರ ಆದೇಶದ ಮೇರೆಗೆ ತನ್ನ ಸುಪರ್ದಿಗೆ ಪಡೆದಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಸನ ಕಾರಾಗೃಹದಿಂದ ವಿಡಿಯೋ ಕಾಲ್ ಮುಖೇನ ಹಾಜರಿರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಆರೋಪಿತರ ಪರ ವಕೀಲರಿಂದಃ**

ಆರೋಪಿ ಪರ ವಕೀಲರು ಗೈರು ಹಾಜರಿದ್ದು ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**sd/-**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**

**1ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ   525/2017**

ಹೆಸರುಃ  ಪಿ.ಬಸಣ್ಣ                                                                 ಸಿ.ಡಬ್ಲ್ಯೂಃ 10

ವಯಸ್ಸುಃ   60                                                                    ಪಿ.ಡಬ್ಲ್ಯೂಃ 9

ತಂದೆಃ       ಸಣ್ಣ ಪಾಪಣ್ಣ

ಉದ್ಯೋಗಃ  ನಿವೃತ್ತ  ಸಿ.ಎ.ಓ. ಚನ್ನಗಿರಿ ನಗರಸಭೆ

ವಾಸ ಸ್ಥಳಃ   ಚಳ್ಳಕೆರೆ

ಸಾಕ್ಷಿಗೆ  ದಿನಾಂಕಃ  07-08-2023ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

ದಿಃ  17-10-2016  ರಂದು  ಪ್ರಕರಣಕ್ಕೆ  ಸಂಬಂಧಿಸಿದ ಜಾಮೀಯಾ ಮಸೀದಿಯ ಆಸ್ತಿ ಸಂಃ 6/6 ಮತ್ತು 7/7 ರ ಡಿ.ಸಿ.ಬಿ. ರಿಜಿಸ್ಟರ್ ನ ಧೃ. ಪ್ರತಿಯನ್ನು ಚಾಸಾ 12 ರವರಿಗೆ ನೀಡಿರುತ್ತೇನೆ . ಸದರಿ ದಾಖಲೆಗಳನ್ನು ಈಗಾಗಲೇ ನಿ ಪಿ 6  ಮತ್ತು ನಿ ಪಿ 7 ಎಂದು ಗುರುತಿಸಲಾಗಿದೆ .  ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ ಪಿ 6(ಬಿ ) ಮತ್ತು ನಿ ಪಿ 7(ಬಿ ) ಎಂದು ಗುರುತಿಸಲಾಯಿತು .

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಪೊಲೀಸರು ದಿನಾಂಕಃ 17-10-2016 ರ ಒಂದು ದಿನ ಮುಂಚಿತವಾಗಿ ನ ನಿ ಪಿ 6 ಮತ್ತು  7ರಲ್ಲಿ ಇರುವ ದಾಖಲೆಗಳನ್ನು ಕೋರಿ ಅರ್ಜಿಯನ್ನು ಸಲ್ಲಿಸಿದ್ದರು .ಜಾಮೀಯಾ ಮಸೀದಿಯ ಹೆಸರಿಗೆ ಯಾವ ದಿನಾಂಕದಂದು ಖಾತೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ . ಪೊಲೀಸರು ನೀಡಿದ ಅರ್ಜಿ ಹಾಗೂ ದಾಖಲೆಗಳನ್ನು ನೀಡಿದ ವಿವರಗಳನ್ನು ನಾನು ನಮ್ಮ ರಿಜಿಸ್ಟರ್ ನಲ್ಲಿ ದಾಖಲಿಸಿರುತ್ತೇನೆ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**<u>ಮರುವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**01ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**

**1ನೇ  ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ , ಚನ್ನಗಿರಿ .**

**ಸಿ.ಸಿ. ಸಂಖ್ಯೆಃ   525/2017**

ಹೆಸರುಃ  ವೀರಬಸಪ್ಪ ಕುಸ್ಲಾಪುರ  ಸಿ.ಡಬ್ಲ್ಯೂಃ 12

ವಯಸ್ಸುಃ   37  ಪಿ.ಡಬ್ಲ್ಯೂಃ 8

ತಂದೆಃ    ಲಕ್ಷ್ಮಪ್ಪ ಕುಸ್ಲಾಪುರ

ಉದ್ಯೋಗಃ  ಪೋಲೀಸ್ ಸಬ್ ಇನ್ಸ್‌ಪೆಕ್ಟರ್ .  ಚಿತ್ರದುರ್ಗ

ವಾಸ ಸ್ಥಳಃ   ಚಿತ್ರದುರ್ಗ

ಸಾಕ್ಷಿಗೆ  ದಿನಾಂಕಃ  07-08-2023ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಸಅಅರವರಿಂದ ಮುಖ್ಯ ವಿಚಾರಣೆ**

30-05-2016 ರಿಂದ 30-05-2018 ರವರೆಗೆ ಪಿ.ಎಸ್.ಐ ಆಗಿ ಚನ್ನಗಿರಿ ಪೊಲಿಸ್ ಠಾಣೆಯಲ್ಲಿ ಕತರ್ವ್ಯನಿರ್ವಹಿಸಿರುತ್ತೇನೆ.

ಸದರಿ ಪ್ರಕರಣದ ಕಡತವನ್ನು ಚಾಸಾ 11ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರೆಸಿರುತ್ತೇನೆ .

ದಿಃ 17-10-2016  ರಂದು ಸದರಿ ಪ್ರಕರಣಕ್ಕೆ ಸಂಬಂಧಿಸಿದ ಆಸ್ತಿ ಸಂಃ 6/6 ಮತ್ತು 7/7 ರ ಡಿ.ಸಿ.ಬಿ. ರಿಜಿಸ್ಟರ್ ನ ಧೃ. ಪ್ರತಿಯನ್ನು ಚಾಸಾ 10 ರವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ . ಸದರಿ ದಾಖಲೆಗಳನ್ನು ನ್ನು ನಿ ಪಿ 6  ಮತ್ತು ನಿ ಪಿ 7 ಎಂದು ಗುರುತಿಸಲಾಯಿತು  ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿ ಪಿ 6(ಎ) ಮತ್ತು ನಿ ಪಿ 7(ಎ) ಎಂದು ಗುರುತಿಸಲಾಯಿತು .

ದಿಃ 27-01-2017 ರಂದು ಪ್ರಕರಣಕ್ಕೆ ಸಂಬಂಧಿಸಿದ ವಾಹನ ಸಂಃ ಕೆಎ 18-ಜಿ-2914ನೇ ಬಜಾಜ್ ಕಂಪನಿಯ ಎಂ-80 ಬೈಕ್ ನ್ನು ಪೊಲೀಸ್ ಪೇದೆ ಸಂಖ್ಯೆಃ 889 , ರವಿದಾದಪೂರ್ ರವರು ಚನ್ನಗಿರಿ ಠಾಣಾ ಆವರಣಕ್ಕೆ ಹಾಜರುಪಡಿಸಿರುತ್ತಾರೆ . ಸದರಿ ಸಮಯದಲ್ಲಿ ನಿ ಪಿ 5 ರಂತೆ  ಅಮಾನತ್ತು ಪಂಚನಾಮೆಯನ್ನು ಚಾಸಾ 6 ಮತ್ತು 7ರವರ ಸಮಕ್ಷಮ ಸಂಜೆ 5.00 ರಿಂದ 5.45

ರವರೆಗೆ ಜರುಗಿಸಿರುತ್ತೇನೆ .

ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿ ಪಿ5 ಎಂದು ಗುರುತಿಸಲಾಗಿದೆ . ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 5(ಸಿ) ಎಂದು ಗುರುತಿಸಲಾಯಿತು . ಸದರಿ ಮಾಲನ್ನು ಘನ ನ್ಯಾಯಾಲಯಕ್ಕೆ ಮಾಲು ಪಟ್ಟಿ ಸಂಖ್ಯೆಃ 25/2017 ರಲ್ಲಿ ಅನುಮತಿಯನ್ನು ಪಡೆದು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಆದೇಶದ ಮೇರೆಗೆ ಸದರಿ ವಾಹನವನ್ನು ಬಿಡುಗಡೆಗೊಳಿಸಲಾಗಿದೆ .

ದಿಃ 17-02-2017 ರಂದು ತನಿಖೆ ಪೂರ್ಣಗೊಂಡಿದ್ದರಿಂದ ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ .

**ಪಾಟೀಸವಾಲು ಆರೋಪಿ ಪರ ವಕೀಲರಿಂದಃ**

ಸದರಿ ಪ್ರಕರಣಕ್ಕಾಗಿ ನಿ ಪಿ 6 ಮತುತ 7ರಲ್ಲಿಇರುವ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.. ನಿ ಪಿ 5 ಪೊಲೀಸ್ ಠಾಣಾ ಆವರಣದಲ್ಲಿ ಮಾಡದೇ ಪೊಲೀಸ್ ಠಾಣೆಯ ಒಳಗೆ ಜರುಗಿಸಿರುತ್ತೇನೆ ಎಂದರೆ ಸರಿಯಲ್ಲ. ರವಿದಾದಾಪೂರ್ ರವರ ಹೇಳಿಕೆಯನ್ನು ಪಡೆದಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರವಿದಾದಾಪೂರ್ ರವರ ಸಹಿಯನ್ನು ನಿ ಪಿ 5 ರಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ರವಿದಾದಾಪೂರ್ ರವರಿಂದ ಹೇಳಿಕೆಯನ್ನು ಪಡೆಯದೇ ಸುಳ್ಳು ದೋ.ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಸುಳ್ಳು ದೋ.ಪಟ್ಟಿಯನ್ನು ಸಲ್ಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ . ಆರೋಪಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**<u>ಮರುವಿಚಾರಣೆ ಇಲ್ಲ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪರಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**01ನೇ ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ,**

**ಚನ್ನಗಿರಿ.**